## ಮಕ್ಕಳ ಹಕ್ಕುಗಳ ಗ್ರಾಮಸಭೆ; ಇದು ಕರ್ನಾಟಕದ ವಿಶೇಷ

ನಮ್ಮ ದೇಶದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ 40 ಭಾಗ 18 ವರ್ಷದೊಳಗಿನ ಮಕ್ಕಳೇ ಇರುವುದು. ಈ ಲೆಕ್ಕದಲ್ಲಿ ಸುಮಾರು 50 ಕೋಟಿಗೂ ಹೆಚ್ಚು ಮಕ್ಕಳು ಭಾರತದಲ್ಲಿ ಇದ್ದಾರೆ (ಜನಗಣತಿ 2011). ಈ ಮಕ್ಕಳಲ್ಲಿ ಪ್ರತಿಶತ 70 ಭಾಗ, ಅಂದರೆ ಸುಮಾರು 35 ಕೋಟಿಗೂ ಹೆಚ್ಚು ಮಕ್ಕಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳ ಮಕ್ಕಳ ಹಕ್ಕುಗಳು, ಅವಕಾಶಗಳು ಮತ್ತು ಸೌಲಭ್ಯಗಳನ್ನು ಖಾತರಿ ಪಡಿಸಲು 2006ರಿಂದ ಕರ್ನಾಟಕ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ರಾಜ್ಯದ ಎಲ್ಲ ಗ್ರಾಮಪಂಚಾಯತಿಗಳಲ್ಲಿ 'ಮಕ್ಕಳ ಹಕ್ಕುಗಳ ಗ್ರಾಮಸಭೆ'ಗಳನ್ನು ಆಯೋಜಿಸುತ್ತಿದೆ.

ಈ ವಿಶೇಷವಾದ ಗ್ರಾಮಸಭೆಗಳಲ್ಲಿ ಮಕ್ಕಳು ಮತ್ತು ಮಕ್ಕಳಿಗಾಗಿ ಆರೋಗ್ಯ, ಶಿಕ್ಷಣ, ರಕ್ಷಣೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳನ್ನು ನಿರ್ವಹಿಸುವ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳು, ಪೋಷಕರು ಮತ್ತು ನಾಗರಿಕರು, ಗ್ರಾಮಪಂಚಾಯತಿಗಳ ಚುನಾಯಿತ ಸದಸ್ಯರು ಆಯಾ ಗ್ರಾಮಪಂಚಾಯತಿಗಳ ಅಧ್ಯಕ್ಷರ ನೇತೃತ್ವದಲ್ಲಿ ಸಭೆಗಳನ್ನು ನಿರ್ದಿಷ್ಟ ದಿನದಂದು ನಡೆಸುತ್ತಾರೆ. ಈ ಸಭೆಗಳಲ್ಲಿ ಆಯಾ ಗ್ರಾಮಪಂಚಾಯತಿಗಳ ಮಕ್ಕಳ ಸ್ಥಿತಿಗತಿಗಳನ್ನು ಕುರಿತು ವಿವರವಾದ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಚರ್ಚೆ ಮಾಡಲಾಗುತ್ತದೆ. ಮಕ್ಕಳು ತಮ್ಮನ್ನು ಬಾಧಿಸುತ್ತಿರುವ ವಿಚಾರಗಳನ್ನು ಕುರಿತು ಹೇಳಿಕೊಳ್ಳುತ್ತಾರೆ ಮತ್ತು ಪರಿಹಾರಕ್ಕಾಗಿ ಆಗ್ರಹಿಸುತ್ತಾರೆ.

ಸಮುದಾಯದಲ್ಲಿ ಮಕ್ಕಳು ಎದುರಿಸುವ ವಿವಿಧ ಸಮಸ್ಯೆಗಳು – ಅಂಗನವಾಡಿ, ಶಾಲೆ, ಆರೋಗ್ಯ ಕೇಂದ್ರ, ರಸ್ತೆ, ದೀಪ, ಸಾರಿಗೆ ವ್ಯವಸ್ಥೆ, ಬಾಲ್ಯವಿವಾಹ, ಬಾಲಕಾರ್ಮಿಕರು ಇರುವುದು, ಮಕ್ಕಳ ಮೇಲಿನ ದೌರ್ಜನ್ಯಗಳು, ಅಂಗವಿಕಲತೆಯಿರುವ ಮಕ್ಕಳ ವಿಚಾರಗಳು ಇವೇ ಮೊದಲಾದವುಗಳನ್ನು ಮಕ್ಕಳು ಗ್ರಾಮಸಭೆಗಳಲ್ಲಿ ಎತ್ತಿಕೊಳ್ಳುತ್ತಿದ್ದಾರೆ. ಬಹಳ ಮುಖ್ಯವಾಗಿ ವಯಸ್ಕರ ಕಣ್ಣಿಗೆ ಬೀಳದ ಅಥವಾ ವಯಸ್ಕರು ಪರಿಗಣಿಸದ ವಿಚಾರಗಳನ್ನು ಮಕ್ಕಳು ಸಮುದಾಯ–ಸರ್ಕಾರಗಳ ಗಮನಕ್ಕೆ ತರುತ್ತಿದ್ದಾರೆ.

ರಾಜ್ಯದಲ್ಲಿರುವ 6000ದಷ್ಟು ಗ್ರಾಮಪಂಚಾಯತಿಗಳು ನಡೆಸುವ ಈ ಮಕ್ಕಳ ಹಕ್ಕುಗಳ ಗ್ರಾಮಸಭೆಗಳಲ್ಲಿ ಪ್ರತಿವರ್ಷ ಸುಮಾರು ಎರಡು ಲಕ್ಷದಷ್ಟು ಮಕ್ಕಳು ಭಾಗವಹಿಸುತ್ತಾ, ಕಳೆದ 15 ವರ್ಷಗಳಲ್ಲಿ ಸುಮಾರು 30 ಲಕ್ಷಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದಾರೆ. ಇದರಿಂದಾಗಿ, ಸರ್ಕಾರದೊಡನೆ ನೇರವಾಗಿ ಸಮಾಲೋಚಿಸಿರುವ ಮತ್ತು ತಮ್ಮ ಅಹವಾಲುಗಳನ್ನು ಮಂಡಿಸಿರುವ ದೊಡ್ಡ ಚಳವಳಿಯೇ ರೂಪುಗೊಂಡಿದೆ.

ನಾಗರಿಕರು; ಅಂದರೆ ಸಂವಿಧಾನದಲ್ಲಿ ಹೇಳಿರುವ ಹಕ್ಕುಗಳನ್ನು ಹೊಂದಿರುವ ನಾಗರಿಕರು. ಭಾರತದ ಎಲ್ಲ ಕಾಯಿದೆಗಳು ಮತ್ತು ಮಕ್ಕಳಿಗೆಂದೇ ನಿರ್ಮಿಸಲಾಗಿರುವ ವಿಶೇಷ ಕಾನೂನುಗಳ, ಕಾರ್ಯಕ್ರಮಗಳ ರಕ್ಷಣೆಯನ್ನು ಮಕ್ಕಳು ಹೊಂದಿದ್ದಾರೆ.

'ನಾಳಿನ ಪ್ರಜೆಗಳು' ಎನ್ನುವ ಘೋಷಣೆಯನ್ನು ನಾವೀಗ 'ಮಕ್ಕಳು ಪ್ರಜೆಗಳು' ಎಂದು ಬದಲಿಸಲೇಬೇಕು. ಈ ದೃಷ್ಟಿಯಿಂದಲೇ ಮಕ್ಕಳಿಗೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳು, ಯೋಜನೆಗಳನ್ನು ಸಮರ್ಥವಾಗಿ ಜಾರಿ ಮಾಡಬೇಕು.

### 'ಶ್ವೇತಜ್ವಾಲೆ' ಮಕ್ಕಳ ಹಕ್ಕುಗಳ ಮಾತೆ

ಇಂಗ್ಲೆಂಡಿನಲ್ಲಿ 1876ರ ಆಗಸ್ಟ್ 25ರಂದು ಜನಿಸಿದ ಎಗ್ಲಾಂಟೈನ್ ಜೆಬ್ ಸದಾಕಾಲಕ್ಕೂ ಸಾಮಾಜಿಕ ಸುಧಾರಣೆಯ ಬಗ್ಗೆಯೇ ಚಿಂತಿಸುತ್ತಿದ್ದ ಮಹಿಳೆ. ಸಮಾಜಕ್ಕೆ ಏನಾದರೊಂದು ಒಳಿತು ಮಾಡಲೇಬೇಕು ಎನ್ನುವುದು ಎಂಗ್ಲಾಟೈನ್ ಮಹಾಶಯಳ ಹಂಬಲವಾಗಿತ್ತು.

ಯೂರೋಪಿನ ದೇಶಗಳ ನಡುವೆ ಭುಗಿಲೇಳುತ್ತಿದ್ದ ಯುದ್ಧಗಳ ಭಯಾನಕತೆಯ ಅರಿವು ಆಕೆಗೆ ಮೊದಲು ಆದದ್ದು 1912ರಲ್ಲಿ. ಯೂರೋಪಿನ ಬಾಲ್ಕನ್ ಪ್ರದೇಶದಲ್ಲಿ ಯುದ್ಧಗಳಿಂದ ತೊಂದರೆಗೆ ಈಡಾದ ಜನರಿಗೆ ಪರಿಹಾರ ನಿಧಿ ಸಂಗ್ರಹಿಸಲು ಕೆಲಸ ಮಾಡಿದ್ದರು. ಮೊದಲ ಮಹಾಯುದ್ಧ ಮುಗಿದ ಸಮಯದಲ್ಲಿ ಯೂರೋಪಿನ ವಿವಿಧ ಭಾಗಗಳಿಗೆ ಪರಿಹಾರ ಸಾಮಗ್ರಿಗಳು ತಲುಪದಂತೆ ಇಂಗ್ಲೆಂಡ್ ದೇಶದ ಸೈನಿಕರು ತಡೆ ಒಡ್ಡಿ ಮಕ್ಕಳು, ಮಹಿಳೆಯರನ್ನೂ ಒಳಗೊಂಡಂತೆ ಸಾವಿರಾರು ಜನರು ತೊಂದರೆ ಅನುಭವಿಸುವುದನ್ನು ಎಗ್ಲಾಂಟೈನ್ ಕಂಡಿದ್ದಳು. ಮಕ್ಕಳಿಗೆ ತಲುಪಬೇಕಾದ ಆಹಾರ–ಔಷಧಿಯನ್ನು



ಏಕೆ ದಬ್ಬಾಳಿಕೆಯಿಂದ ತಡೆಯುತ್ತೀರಿ ಎಂದು ಇಂಗ್ಲೆಂಡ್ ಸರ್ಕಾರವನ್ನು ಪ್ರಶ್ನಿಸಿದ್ದಕ್ಕಾಗಿ ಎಗ್ಲಾಂಟೈನಳನ್ನು ಪೊಲೀಸರು ಬಂಧಿಸಿ ನ್ಯಾಯಾಲಯದೆದುರು ನಿಲ್ಲಿಸಿದ್ದರು. ಅಲ್ಲಿಯೂ ತನ್ನ ನಿಲುವನ್ನು ಪ್ರತಿಪಾದಿಸಿದ ಆಕೆ, ತನ್ನ ಚಳವಳಿಗೆ ಬೆಂಬಲ ಕೊಡುವಂತೆ ನ್ಯಾಯಾಧೀಶರನ್ನೇ ಒತ್ತಾಯಿಸಿದಳು. ಮುಂದೆ ತನ್ನ ಸೋದರಿ ಡೋರೊತಿ ಜೊತೆಗೂಡಿ ಇಂಗ್ಲೆಂಡ್ ಮತ್ತು ಯೂರೋಪಿನ ಇತರ ಸರ್ಕಾರಗಳ ಮೇಲೆ ಒತ್ತಡ ಹಾಕಿ, ಜನರಿಗೆ ತಲುಪಬೇಕಾದ ನೆರವಿನ ಸಾಮಗ್ರಿಗಳು ಸಿಗುವಂತೆ ಮಾಡುವಲ್ಲಿ 1919ರಲ್ಲಿ ಯಶಸ್ವಿಯಾದರು.

ಯುದ್ಧಗಳಿಂದ ಜರ್ಜರಿತವಾದ ಯೂರೋಪಿನ ರಾಷ್ಟ್ರಗಳಲ್ಲಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಆಹಾರ, ಔಷಧಿಗಳನ್ನು ಒದಗಿಸಲು ಧನಸಂಗ್ರಹಿಸಲು 'ಸೇವ್ ದ ಚಿಲ್ಡ್ರನ್ ಫಂಡ್' ಅನ್ನು ಜೆಬ್ ಸೋದರಿಯರು 1919ರಲ್ಲಿ ಆರಂಭಿಸಿದರು. ಕೇವಲ ಮೂರ್ನಾಲ್ಕು ವರ್ಷಗಳಲ್ಲಿ ಯುನೈಟೆಡ್ ಕಿಂಗ್‌ಡಂನಲ್ಲಿ 'ಸೇವ್ ದ ಚಿಲ್ಡ್ರನ್' ಸಂಸ್ಥೆಯು ಜನರ ಮನ್ನಣೆ, ಬೆಂಬಲ ಪಡೆದು ಸರ್ಕಾರಗಳೇ ಆಶ್ಚರ್ಯಪಡುವಂತೆ ಅಪಾರವಾದ ಸಹಾಯ ಪಡೆದು ನೊಂದವರಿಗೆ ತಲುಪಿಸುವಲ್ಲಿ ಯಶಸ್ವಿಯಾಯಿತು. ಇದರಿಂದಾಗಿ ಎಗ್ಲಾಂಟೈನ್ ಜೆಬ್ ಮಕ್ಕಳಿಗಾಗಿ ಅತ್ಯಂತ ಕಾಳಜಿ ಇರುವ ಹಾಗೂ ಉತ್ಕಟವಾದ ಭಾವನೆಗಳಿರುವ ಅಂತರರಾಷ್ಟ್ರೀಯ ಮಟ್ಟದ ವ್ಯಕ್ತಿಯಾಗಿ ಬೆಳೆದರು. ಜಗತ್ತಿನ ಯಾವುದೇ ಭಾಗದಲ್ಲೂ, ಯಾವುದೇ ಕಾರಣಕ್ಕೆ ದೇಶ, ಭಾಷೆ, ಬಣ್ಣ, ಜನಾಂಗ, ರಾಜಕೀಯ ನಿಲುವು ಇಂಥ ಯಾವುದೇ ರೀತಿಯ ತಾರತಮ್ಯಗಳನ್ನು ತೋರದೆ, ತೊಂದರೆಗೀಡಾದ ಮಕ್ಕಳಿಗೆ ನೆರವು ನೀಡುವ ನಿಲುವನ್ನು ಅವರು ಅಭಿವೃದ್ಧಿಪಡಿಸಿದರು.

ಬಿಳಿ ಕೂದಲಿನ ಕೃಶಕಾಯದ ಎತ್ತರದ ನಿಲುವಿನ ಎಗ್ಲಾಂಟೈನ್ ಜೆಬ್ ಅನ್ನು ಆಕೆಯ ಪರಿಚಿತರು 'ಶ್ವೇತ ಜ್ವಾಲೆ' ಎಂದು ಕರೆಯುತ್ತಿದ್ದರು. ಮಕ್ಕಳ ಪರವಾದ ಆಕೆಯ ಮನಸ್ಥೈರ್ಯ ಮತ್ತು ಗುರಿಗಳನ್ನು ಈಡೇರಿಸಬೇಕೆನ್ನುವ ಅವರ ಗಟ್ಟಿ ನಿಲುವನ್ನು ಜಗತ್ತಿನ ಬಹುತೇಕ ದೇಶಗಳ ಜನ ಮೆಚ್ಚಿದರು. ಎಗ್ಲಾಂಟೈನ್‌ಎ ಚಿಂತನೆಯ ಕೂಸಾದ ಮಕ್ಕಳ ಹಕ್ಕುಗಳ ಕಲ್ಪನೆಯನ್ನು 'ಲೀಗ್ ಆಫ್ ನೇಷನ್ಸ್' ಒಪ್ಪಿಕೊಂಡಿತ್ತು. (ಆ ವಿಚಾರಗಳೇ ಮುಂದೆ ವಿಶ್ವಸಂಸ್ಥೆಯು 1989ರಲ್ಲಿ ಹೊರಡಿಸಿರುವ 'ಮಕ್ಕಳ ಹಕ್ಕುಗಳ ಒಡಂಬಡಿಕೆ'ಗೆ ಮೂಲಾಧಾರವಾಯ್ತು).

ಇಡೀ ಯೂರೋಪಿನಲ್ಲಿ ಕಾಲಿಗೆ ಗಾಲಿ ಕಟ್ಟಿಕೊಂಡವಳಂತೆ ಮಕ್ಕಳ ಹಿತ ಕಾಪಾಡಲು ಓಡಾಡಿದ ಜೆಬ್, 52 ವರ್ಷದವರಾಗಿದ್ದಾಗ ಅನಾರೋಗ್ಯದಿಂದ (1928ರ ಡಿ. 17) ಜಿನೀವಾದಲ್ಲಿ ನಿಧನ ಹೊಂದಿದರು.

ಪ್ರತಿಕ್ರಿಯಿಸಿ: feedback@sudha.co.in